ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 50- 60
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಆಶ್ರಮ ಶಾಲೆಗಳ ಪಾತ್ರ

**ಡಾ. ರವಿಕುಮಾರ.ಎಸ್***

*ಸಂಶೋಧನಾ ಸಹಾಯಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು

***Abstract:***

*ಯಾವುದೇ ಒಂದು ರಾಷ್ಟ್ರದ ಆದರ್ಶ ಕಲ್ಪನೆಗಳು, ಸಾಂಸ್ಕೃತಿಕ ಮೌಲ್ಯಗಳು, ಆರ್ಥಿಕ ಹಾಗೂ ಸಾಮಾಜಿಕ ಒಲವು ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ಬುಡಕಟ್ಟು ಸಮುದಾಯಗಳ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ತಮ್ಮ ಪಾರಂಪರಿಕ ಮೌಲ್ಯಗಳು ಕೌಶಲ್ಯಗಳು ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಮೌಖಿಕವಾಗಿ ಕುಟುಂಬ ಅಥವಾ ಸಮುದಾಯಗಳ ಮೂಲಕ ತಲೆಮಾರಿನಿಂದ ತಲೆಮಾರಿಗೆ ಅನೌಪಚಾರಿಕವಾಗಿ ಬೆಳೆಸಿಕೊಂಡು ಬಂದಿದೆ. ಅರ್ಧ ಶತಮಾನಗಳ ನಂತರವೂ ಅದರಲ್ಲೂ ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸಿದರೂ ತಳ ಸಮುದಾಯದ ಜನ ಸಾಮಾನ್ಯರಿಗೆ ಅದರಲ್ಲೂ ಬುಡಕಟ್ಟು ಸಮುದಾಯಗಳಿಗೆ ಶಿಕ್ಷಣದ ಅವಕಾಶವನ್ನು ಕಲ್ಪಿಸದಿರುವುದು ಅಘಾತಕಾರಿಯಾದ ವಿಷಯವಾಗಿದೆ. ಬುಡಕಟ್ಟು ಸಮುದಾಯಗಳು ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಬಹಳ ಮುಖ್ಯವಾದ ವಿಷಯವಾಗಿದೆ. ಈ ದಿಶೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಬುಡಕಟ್ಟು ಸಮುದಾಯಗಳ ಶಿಕ್ಷಣದ ಅವಶ್ಯಕತೆಯನ್ನು ಮನಗಂಡು ವಿವಿಧ ಬುಡಕಟ್ಟು ಪ್ರದೇಶಗಳಲ್ಲಿ ಶಾಲೆಗಳಲ್ಲಿಯೇ ಬುಡಕಟ್ಟು ಮಕ್ಕಳಿಗೆ ವಸತಿ, ಉಚಿತ ಊಟ, ಬಟ್ಟೆ, ಪಠ್ಯ-ಪುಸ್ತಕ, ಲೇಖನ ಸಾಮಾಗ್ರಿಗಳು ಹಾಗೂ ವಿದ್ಯಾರ್ಥಿ ವೇತನ ಇವೇ ಅಲ್ಲದೆ ಇನ್ನೂ ಅನೇಕ ಪ್ರೋತ್ಸಾಹದಾಯಿಕ ಯೋಜನೆಗಳನ್ನು ಹಮ್ಮಿಕೊಂಡು 1952ರಲ್ಲಿ ಆಶ್ರಮ ಶಾಲೆಗಳನ್ನು ಆರಂಭಿಸಲಾಯಿತು. ಇದರ ಹಿನ್ನೆಲೆಯಿಂದ ಆಶ್ರಮ ಶಾಲೆಯಲ್ಲಿ ಕಲಿಯುತ್ತಿರುವ ಬುಡಕಟ್ಟು ಮಕ್ಕಳು ಹೇಗೆ ಶೈಕ್ಷಣಿಕವಾಗಿ ಅಭಿವೃದ್ಧಿಯ ಪ್ರಗತಿಯನ್ನು ಸಾಧಿಸುತ್ತಿದ್ದಾರೆ ಎಂಬುದನ್ನು ತಿಳಿಯಲು ಈ ಅಧ್ಯಯನದ ಮೂಲಕ ಕಂಡು ಕೊಳ್ಳುವ ಪ್ರಯತ್ನ ಮಾಡಲಾಗಿದೆ.*

***Keywords:** ಆಶ್ರಮಶಾಲೆ, ಶಿಕ್ಷಣ, ಬುಡಕಟ್ಟು ಮಕ್ಕಳು, ಹೆಚ್.ಡಿ.ಕೋಟೆ.*

## ಪೀಠಿಕೆ

ಬುಡಕಟ್ಟು ಸಮುದಾಯಗಳ ಜೀವನಾಭಿವೃದ್ಧಿ ಮತ್ತು ಶಿಕ್ಷಣ ಹಾಗೂ ಸಂಸ್ಕೃತಿಯ ಕುರಿತು ಭಾರತದ ಪ್ರಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರು ಹೇಳಿದ್ದು ಹೀಗೆ "ಆಧುನಿಕತೆ ಹಾಗೂ ಸುಧಾರಣಾವಾದದ ನೆಲೆಯಲ್ಲಿ ಬುಡಕಟ್ಟುಗಳ ಸಂಸ್ಕೃತಿಯನ್ನು ನಿರ್ಲಕ್ಷಿಸುವ ಹಾಗಿಲ್ಲ, ಶಿಕ್ಷಣ ಪಠ್ಯಕ್ರಮ ಹಾಗೂ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯ ಪೂರಕ ವ್ಯವಸ್ಥೆಯು ಅಷ್ಟು ಸುಲಭದಕಾರ್ಯವಲ್ಲ. ಔಪಚಾರಿಕ ಶಿಕ್ಷಣದಿಂದ ನಾವು ಬುಡಕಟ್ಟುಗಳ ಶಿಕ್ಷಣ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿಲ್ಲ. ಅದಕ್ಕಾಗಿ ವಿಶೇಷ ಶಿಕ್ಷಣದ ಕ್ರಮಗಳನ್ನು ಅವರ ಅಗತ್ಯಗಳ ಅನುಸಾರವಾಗಿ ರೂಢಿಸಬೇಕಾದ ತುರ್ತು

***Please cite this article as**: ರವಿಕುಮಾರ ಎಸ್. (2022). ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಆಶ್ರಮ ಶಾಲೆಗಳ ಪಾತ್ರ, *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(4), 50–60.

ಅಗತ್ಯವಿದೆ". (ಜವಾಹರಲಾಲ್ ನೆಹರು, ಆದಿವಾಸಿ, 1965) ಇದು ನೆಹರುರವರಿಗೆ ಸ್ವಾತಂತ್ರ್ಯ ನಂತರ ಬುಡಕಟ್ಟು ಸಮುದಾಯದ ಶಿಕ್ಷಣ ಕುರಿತು ಇದ್ದ ಕಳಕಳಿ ಹಾಗೂ ಮುನ್ನೋಟವನ್ನು ತಿಳಿಸುತ್ತದೆ.

ಬುಡಕಟ್ಟು ಶಿಕ್ಷಣ ಹಾಗೂ ಸಮುದಾಯಗಳ ಹಿತ್ತಾಸಕ್ತಿಯನ್ನು ಕಾಪಾಡುವ ಕಾನೂನು ಸೌಲಭ್ಯಗಳು ಸಂವಿಧಾನದಲ್ಲಿ ರೂಪಿತವಾದವು. (ಕಲಂ.46. ಪರಿಶಿಷ್ಟ ಜಾತಿ–ಜನಾಂಗದ ಶೈಕ್ಷಣಿಕ ಹಾಗೂ ಆರ್ಥಿಕ ಹಿತನನ್ನು ರಕ್ಷಿಸುವುದು ರಾಜ್ಯದ ಹೊಣೆಗಾರಿಕೆಯಾಗಿದೆ. ರಾಜ್ಯವು ಈ ವರ್ಗಗಳನ್ನು ಸಾಮಾಜಿಕ ಅನ್ಯಾಯ ಹಾಗೂ ಎಲ್ಲ ಬಗೆಯ ಆಕ್ರಮಣಗಳಿಂದ ರಕ್ಷಸಬೇಕು). **'ಕೊಠಾರಿ ಶಿಕ್ಷಣ'** ಆಯೋಗವು (1964–66) ರಲ್ಲಿ ತನ್ನ ಶಿಫಾರಸ್ಸಿನ ಬುಡಕಟ್ಟು ಜನಾಂಗದ ಶಿಕ್ಷಣಕ್ಕೆ ಆದ್ಯತೆ ನೀಡುವಂತೆ ತಿಳಿಸಿತು. "ನಿರ್ಲಕ್ಷಿತ ಕ್ಷೇತ್ರಗಳಿಗೆ ಶಿಕ್ಷಣವನ್ನು ಪ್ರಸಾರ ಮಾಡಬೇಕೆಂದು ಸೂಚಿಸಿತು". ಗುಡ್ಡಗಾಡು ಪ್ರದೇಶಗಳು ಆದ್ಯತೆಯ ಕೇಂದ್ರಗಳಾಗಿ ಬದಲಾದವು. ಪ್ರಾಥಮಿಕ ಶಿಕ್ಷಣ, ವಸತಿ ಮಾದರಿಯ ಆಶ್ರಮ ಶಾಲೆಗಳ ಸ್ಥಾಪನೆ, ಶಾಲಾ ಆರಂಭದ ಎರಡು ವರ್ಷಗಳ ಶಿಕ್ಷಣ, ಬೋಧನಾ ಮಾಧ್ಯಮ ಬುಡಕಟ್ಟು ಸಮುದಾಯದ ಭಾಷೆಯೇ ಆಗಿರಬೇಕೆಂದು, ಆನಂತರ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡಬೇಕೆಂದು ಶಿಫಾರಸ್ಸು ಮಾಡಿತು. ಬುಡಕಟ್ಟು ಸಮುದಾಯಗಳ ಶಿಕ್ಷಣದ ಬೆಳವಣಿಗೆಗೆ **'ರಾಷ್ಟ್ರೀಯ ಶಿಕ್ಷಣ ನೀತಿ'** 1986 (N.E.P) ಮಹತ್ವದ ಕೊಡುಗೆಗಳನ್ನು ನೀಡಿತ್ತೆಂದು ಹೇಳಬಹುದು. ಬುಡಕಟ್ಟು ವಾತವರಣದಲ್ಲಿ ಭೋದಿಸಲು ಅರ್ಹ ಹಾಗೂ ಅನುಭವಿ ಶಿಕ್ಷಕರ ನೇಮಕಾತಿಯಾಗಬೇಕೆಂದೂ, ಶಿಕ್ಷಕರನ್ನು ಈ ಪ್ರದೇಶಗಳಿಗೆ ಆಕರ್ಷಿಸಲು ಸರ್ಕಾರ ಪ್ರಯತ್ನಿಸಬೇಕೆಂದು ಸಲಹೆ ನೀಡಿತು.

**ಆಶ್ರಮ ಶಾಲೆ**

ಆಶ್ರಮ ಶಾಲೆ ಎಂದರೆ ಶಾಲೆಗಳಲ್ಲಿಯೇ ಬುಡಕಟ್ಟು ಮಕ್ಕಳಿಗೆ ವಸತಿ, ಉಚಿತ ಊಟ, ಬಟ್ಟೆ, ಪಠ್ಯ–ಪುಸ್ತಕ, ಲೇಖನ ಸಾಮಾಗ್ರಿಗಳು ಹಾಗೂ ವಿದ್ಯಾರ್ಥಿ ವೇತನ ಇವೇ ಅಲ್ಲದೆ ಇನ್ನೂ ಅನೇಕ ಪ್ರೋತ್ಸಾಹದಾಯಕ ಯೋಜನೆಗಳನ್ನು/ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತೆರೆದ ಶಾಲೆಗಳೇ ಆಶ್ರಮ ಶಾಲೆಗಳು.

ಆಶ್ರಮ ಶಾಲೆಗಳನ್ನು 1952ರಲ್ಲಿಯೇ ಪ್ರಾರಂಭಿಸಲಾಯಿತು. ಕಾಲ–ಕ್ರಮೇಣ ಇವುಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಆಶ್ರಮ ಶಾಲೆಗಳನ್ನು ಸ್ಥಾಪಿಸುವುದರ ಮೂಲಕ ಗಿರಿಜನರ ಬದುಕಿನ ಕೌಶಲ್ಯಗಳನ್ನು ಕಲಿಸುವುದರ ಜೊತೆಗೆ ವಿದ್ಯಾಭ್ಯಾಸವನ್ನು ಕಲಿಸಬೇಕು ಎಂಬ ಉದ್ದೇಶದೊಂದಿಗೆ ಆಶ್ರಮ ಶಾಲೆಗಳನ್ನು ಪ್ರಾರಂಭಿಸಲಾಯಿತು. ಗಿರಿಜನರು ಶಿಕ್ಷಣ ಪಡೆದು ಆರ್ಥಿಕವಾಗಿ ಮುಂದೆ ಬರಬೇಕು. ಇವರು ಮುಖ್ಯವಾಹಿನಿಯ ಸವಾಲುಗಳನ್ನು ಎದುರಿಸುವಂತಾಗಬೇಕು. ಆ ಮೂಲಕ ಸ್ವಾವಲಂಬಿಗಳಾಗುತ್ತ ಆತ್ಮಾಭಿಮಾನ ಬೆಳೆಸಿಕೊಳ್ಳಬೇಕು ಎನ್ನುವ ಆಶಯದೊಂದಿಗೆ ಪ್ರಾರಂಭಿಸಲಾಯಿತು.

ಕರ್ನಾಟಕದಲ್ಲಿ ಪ್ರಸ್ತುತ 122 ಆಶ್ರಮ ಶಾಲೆಗಳಿದ್ದು ಒಟ್ಟು 24 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಆದರೆ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಿನ ಆಶ್ರಮ ಶಾಲೆಗಳಿವೆ, ಮೈಸೂರು ಜಿಲ್ಲೆಯ ನಾಲ್ಕು ತಾಲೂಕುಗಳಿಂದ 21, ಕೊಡುಗು ಜಿಲ್ಲೆಯ ಮೂರು ತಾಲೂಕುಗಳಿಂದ 12, ಚಿಕ್ಕಮಂಗಳೂರು ಜಿಲ್ಲೆಯ ಆರು ತಾಲೂಕುಗಳಿಂದ 12 ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲೂಕುಗಳಿಂದ 12 ಉಡುಪಿ ಜಿಲ್ಲೆಯ 2 ತಾಲ್ಲೂಕುಗಳಿಂದ 5 ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲೂಕುಗಳಿಂದ 19 ಹಾಗೂ ರಾಮನಗರ ಜಿಲ್ಲೆಯ ಮೂರು ತಾಲ್ಲೂಕುಗಳಿಂದ 6 ಆಶ್ರಮ ಶಾಲೆಗಳನ್ನು ತೆರೆಯಲಾಗಿದೆ. ಅಂದರೆ 7 ಜಿಲ್ಲೆಗಳಿಂದ

87 ಆಶ್ರಮ ಶಾಲೆಗಳಿದ್ದರೆ 17 ಜಿಲ್ಲೆಗಳಿಂದ 31 ಆಶ್ರಮ ಶಾಲೆಗಳಿರುವುದು ಕಂಡುಬಂದಿದೆ.ಈ ಎಲ್ಲ ಆಶ್ರಮ ಶಾಲೆಗಳ ಮಕ್ಕಳ ಮಂಜೂರಾತಿ ಸಂಖ್ಯೆಯು 14,035 ಆಗಿದೆ. ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಒಟ್ಟು 10 ಗಿರಿಜನ ಆಶ್ರಮ ಶಾಲೆಗಳಿದ್ದು 953 ಮಕ್ಕಳು ದಾಖಲಾಗಿರುವುದು ಕಂಡು ಬಂದಿದೆ.

**ಅಧ್ಯಯನದ ಪ್ರಾಮುಖ್ಯತೆ**

ಹೆಗ್ಗಡದೇವನ ಕೋಟೆಯ ಎಲ್ಲಾ ಬುಡಕಟ್ಟು ಸಮುದಾಯಗಳ ಕುರಿತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಆಶ್ರಮ ಶಾಲೆಗಳ ಪಾತ್ರ ಎಂಬ ವಿಷಯದ ಬಗ್ಗೆ ಯಾವುದೇ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಇದು ತನ್ನದೇ ಪ್ರಾಮುಖ್ಯತೆಯನ್ನು ಹೊಂದಿದೆ. ಪ್ರತಿಯೊಬ್ಬರಿಗೂ ಶಿಕ್ಷಣ ಎನ್ನುವುದು ಬಹಳ ಅಗತ್ಯವಾಗಿರುತ್ತದೆ. ಅದರಲ್ಲೂ ಬುಡಕಟ್ಟು ಸಮುದಾಯ ಮಕ್ಕಳಿಗೆ ಬಹಳ ಅವಶ್ಯಕ. ಏಕೆಂದರೆ ಬುಡಕಟ್ಟು ಸಮುದಾಯದವರನ್ನು ನಾಗರಿಕ ಪ್ರಪಂಚಕ್ಕೆ ತರುವ ಸಾಧನವೇ ಶಿಕ್ಷಣ. ಹೀಗಾಗಿ ಬುಡಕಟ್ಟು ಜನರಿಗೆ ಆಶ್ರಮ ಶಾಲೆಗಳನ್ನು ಪ್ರಾರಂಬಿಸುವುದರ ಮೂಲಕ ಅವರ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವುದರಿಂದ ತನ್ನದೇ ಆದ ಮಹತ್ವನ್ನು ಪಡೆದುಕೊಂಡಿದೆ.

**ಅಧ್ಯಯನದ ಉದ್ದೇಶಗಳು**

- ಆದಿವಾಸಿಗಳ ಶೈಕ್ಷಣಿಕ ಸ್ಥಿತಿ ಮತ್ತು ಆಶ್ರಮ ಶಾಲೆಯ ಹಿನ್ನೆಲೆ ತಿಳಿಯುವುದು.
- ಆಶ್ರಮ ಶಾಲೆಯ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿನ ಪೂರಕ ಅಂಶಗಳು ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಯುವುದು.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ತಾಲೂಕಿನಲ್ಲಿ ಅತಿ ಹೆಚ್ಚು ಬುಡಕಟ್ಟು ಜನಸಂಖ್ಯೆ ಇರುವುದು ಕಂಡು ಬಂದಿದೆ. ಇಲ್ಲಿ ಜೇನುಕುರುಬ, ಬೆಟ್ಟ/ಕಾಡು ಕುರುಬ, ಸೋಲಿಗ, ಯರವ ಹಕ್ಕಿ–ಪಿಕ್ಕಿ ಮುಂತಾದ ಬುಡಕಟ್ಟುಗಳು ಅಲ್ಲಲ್ಲಿ ಹಾಡಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಈ ತಾಲೂಕಿನಲ್ಲಿ ಒಟ್ಟು 116 ಹಾಡಿಗಳಲ್ಲಿ ಆದಿವಾಸಿಗಳು ವಾಸಿಸುತ್ತಿದ್ದು, ಅವರ ಒಟ್ಟು ಜನಸಂಖ್ಯೆ 24.840 ಇದ್ದು ಇವರಲ್ಲಿ ಪುರುಷರು 13,130 ಮಹಿಳೆಯರು 11.710 ಇದ್ದಾರೆ ಇವರು ಜೇನು ನುಡಿ, ಕಾಡು ಭಾಷೆ, ಕನ್ನಡ, ಮಲೆಯಾಳಂ ಭಾಷೆಗಳನ್ನು ಮಾತನಾಡುತ್ತಾರೆ. ಈ ತಾಲೂಕಿನಲ್ಲಿ ಒಟ್ಟು 10 ಗಿರಿಜನ ಆಶ್ರಮಗಳು ಇರುವುದು ಕಂಡು ಬಂದಿವೆ. ಅದರಲ್ಲಿ 3 ಗಿರಿಜನ ಆಶ್ರಮ ಶಾಲೆಗಳನ್ನು ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುತ್ತೇನೆ.

**ಸಂಶೋಧನಾ ವಿಧಾನ**

ಹೆಗ್ಗಡದೇವನ ಕೋಟೆ ತಾಲೂಕಿನ ಲ್ಲಿ 10 ಗಿರಿಜನ ಆಶ್ರಮ ಶಾಲೆಗಳಿದ್ದು ಒಟ್ಟು 953 ಮಕ್ಕಳಿದ್ದಾರೆ. ಇವರಲ್ಲಿ ಗಂಡು ಮಕ್ಕಳು 476 ಹೆಣ್ಣು ಮಕ್ಕಳು 477 ರಷ್ಟಿದ್ದಾರೆ. ಇದರಲ್ಲಿ ನನ್ನ ಅಧ್ಯಯನಕ್ಕೆ 3 ಆಶ್ರಮ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿರುತ್ತೇನೆ. ಈ 3 ಆಶ್ರಮ ಶಾಲೆಗಳಲ್ಲಿ ಒಟ್ಟು 342 ವಿದ್ಯಾರ್ಥಿಗಳಿದ್ದು ಪ್ರತಿಯೊಂದು ಆಶ್ರಮ ಶಾಲೆಯಿಂದ ಒಟ್ಟು 12 ವಿದ್ಯಾರ್ಥಿಗಳಂತೆ 3 ಆಶ್ರಮ ಶಾಲೆಗಳಿಂದ ಒಟ್ಟು 36 ವಿದ್ಯಾರ್ಥಿಗಳನ್ನು ಸರಳ ಯಾದೃಚ್ಛಿಕ ನಮೂನೆ ಆಯ್ಕೆ ಮಾಡಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಕೋಷ್ಟಕ 1: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಾದರಿ/ನಮೂನೆ ವಿವರ**

| ತರಗತಿ | | ಆಶ್ರಮ ಶಾಲೆಗಳು | | | |
|---|---|---|---|---|---|
| | | ಬಿ ಮಟಕೆರೆ ಗಿರಿಜನ ಆಶ್ರಮ ಶಾಲೆ | ಪೆಂಜಳ್ಳಿ ಗಿರಿಜನ ಆಶ್ರಮ ಶಾಲೆ | ಬಸವನಗಿರಿ ಗಿರಿಜನ ಆಶ್ರಮ ಶಾಲೆ | ಒಟ್ಟು |
| 6ನೇ ತರಗತಿ | ಗಂಡು | 3 | 3 | 3 | 9 |
| | ಹೆಣ್ಣು | 3 | 3 | 3 | 9 |
| 7ನೇ ತರಗತಿ | ಗಂಡು | 3 | 3 | 3 | 9 |
| | ಹೆಣ್ಣು | 3 | 3 | 3 | 9 |
| ಒಟ್ಟು | | 12 | 12 | 12 | 36 |

**ಮೂಲ: ಕ್ಷೇತ್ರಕಾರ್ಯ**

**ಮಾಹಿತಿ ಸಂಗ್ರಹಣೆ**

ಪ್ರಾಥಮಿಕ ಮೂಲಗಳು: ಪ್ರಾಥಮಿಕ ಮಾಹಿತಿ ಎಂದರೆ, ಮಾಹಿತಿದಾರರಿಂದ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಪ್ರಾಥಮಿಕ ಮಾಹಿತಿ ಎಂದು ಕರೆಯುತ್ತೇವೆ. ಪ್ರಾಥಮಿಕ ಮಾಹಿತಿಯನ್ನು ಪಡೆಯಲು ವೈಜ್ಞಾನಿಕವಾಗಿ ತಯಾರಿಸಿದ ಪ್ರಶ್ನಾವಳಿ ಅನುಸೂಚಿ ಸಂದರ್ಶನ ಹಾಗೂ ಅವಲೋಕ ವಿಧಾನಗಳ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ.

ಮಾಧ್ಯಮಿಕ ಮೂಲಗಳು: ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮಾಹಿತಿಯ ಪ್ರಾಮುಖ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದ ಮಾಧ್ಯಮಿಕ ಮೂಲಗಳಾದ ಗ್ರಂಥಗಳು, ಲೇಖನಗಳು, ದಿನಪತ್ರಿಕೆಗಳು, ಅಂತರ್ಜಾಲ, ಸಂಶೋಧನಾ ವರದಿಗಳು, ವಿವಿಧ ಇಲಾಖೆಗಳು ಹೊರಡಿಸಿರುವ ಕೈಪಿಡಿಗಳು ಹಾಗೂ ಸರ್ಕಾರಿ ಮತ್ತು ಅರೆಸರ್ಕಾರಿ ಕಛೇರಿಗಳಿಂದ ಪಡೆದ ಮಾಹಿತಿ ಮತ್ತು ಅಂಕಿ ಅಂಶಗಳು ಅಲ್ಲದೆ ಇನ್ನೂ ಮುಂತಾದವುಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಮಾಹಿತಿ ವಿಶ್ಲೇಷಣೆ**

ಶಿಕ್ಷಣವು ಪ್ರತಿಯೊಬ್ಬ ಪ್ರಜೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಮಾಜದಲ್ಲಿ ತಿಳಿದವನೊಬ್ಬನಿದ್ದು, ಆ ವ್ಯಕ್ತಿ ಇತರರಿಗೆ ಶಿಕ್ಷಣದ ಅರಿವು ಮೂಡಿಸಿದಾಗ ಸ್ವಸ್ಥ್ಯ ಸಮಾಜವು ನಿರ್ಮಾಣವಾಗುತ್ತೆ. ಆದ್ದರಿಂದ ಪ್ರತಿಯೊಬ್ಬರಿಗೂ ಶಿಕ್ಷಣ ಅತ್ಯಾವಶ್ಯಕ.

ಕೊಷ್ಟಕ 2 ರಲ್ಲಿ ಬುಡಕಟ್ಟು ಮಕ್ಕಳ ಪೋಷಕರ ವಿದ್ಯಾಭ್ಯಾಸದ ಮಟ್ಟ ಯಾವ ರೀತಿ ಇದೆ ಎಂಬುದನ್ನು ಗಮನಿಸಿದಾಗ ಒಟ್ಟಾರೆ ಎಲ್ಲಾ ಬುಡಕಟ್ಟು ಮಕ್ಕಳ ಪೋಷಕರ ವಿದ್ಯಾಭ್ಯಾಸದ ಮಟ್ಟದಲ್ಲಿ ಶೇ 27.77ರಷ್ಟು ಅನಕ್ಷರಸ್ಥರಿದ್ದು, ಶೇ.35.30ರಷ್ಟು ಪ್ರಾಥಮಿಕ ಶಿಕ್ಷಣವನ್ನು, ಶೇ 6.25ರಷ್ಟು ಜನರು ಮಾಧ್ಯಮಿಕ ಶಿಕ್ಷಣವನ್ನು ಹಾಗೂ ಶೇ. 22.22ರಷ್ಟು ಪ್ರೌಢ ಶಾಲಾ ಶಿಕ್ಷಣವನ್ನು ಪಡೆದುಕೊಂಡಿರುವುದು ಕಂಡುಬಂದಿದೆ. ಇದರಲ್ಲಿ ಹೆಚ್ಚಿನ ಜನರು ಅನಕ್ಷರಸ್ಥರಾಗಿರುವುದು ಕಂಡುಬಂದಿದ್ದು ಶಿಕ್ಷಣದ ಬಗೆಗಿನ ಅರಿವಿನ ಕೊರತೆ ಇದಕ್ಕೆ ಪ್ರಮುಖ ಕಾರಣವಾಗಿದೆ.

ಜೇನುಕುರುಬ ಬುಡಕಟ್ಟು ಸಮುದಾಯದವರಲ್ಲಿ ಶೇ.35.30ರಷ್ಟು ಜನರು ಅನಕ್ಷರಸ್ಥರಾಗಿದ್ದು, ಅಷ್ಟೇ ಪ್ರಮಾಣದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಂಡಿರುವುದು ಕಂಡುಬಂದಿದೆ. ಕಾಡುಕುರುಬ ಸಮುದಾಯದಲ್ಲಿ ಶೇ 66.66ರಷ್ಟು ಹೆಚ್ಚಿನ ಜನರು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದು, ಶೇ 11.11ರಷ್ಟು

ಜನರು ಅನಕ್ಷಸ್ಥರಾಗಿರುವುದು ಕಂಡುಬಂದಿದೆ. ಹಾಗೇ ಯರವರಲ್ಲಿ ಶೇ 45.46ರಷ್ಟು ಜನರು ಮಾಧ್ಯಮಿಕ ಶಿಕ್ಷಣವನ್ನು ಪಡೆದದ್ದು, ಇವರಲ್ಲಿ ಯಾರು ಅನಕ್ಷರಸ್ಥರಿಲ್ಲದಿರುವುದು ಕಂಡುಬಂದಿದೆ.

**ಕೋಷ್ಟಕ 2: ಬುಡಕಟ್ಟು ಮಕ್ಕಳ ಪೋಷಕರ ವಿದ್ಯಾಭ್ಯಾಸದ ವಿವರ**

| ಪೋಷಕರ ವಿದ್ಯಾಭ್ಯಾಸ | ಬುಡಕಟ್ಟಿನ ಹೆಸರು | | | ಒಟ್ಟು |
|---|---|---|---|---|
| | ಜೇನುಕುರುಬ | ಕಾಡುಕುರುಬ | ಯರವ | |
| ಅನಕ್ಷರಸ್ಥರು | 6 (35.30%) | 1 (11.11%) | – | 10 (27.77%) |
| ಪ್ರಾಥಮಿಕ | 6 (35.30%) | 6 (66.66%) | 4 (36.36%) | 16 (44.44%) |
| ಮಾಧ್ಯಮಿಕ | 1 (6.25%) | 1 (11.11%) | 5 (45.46%) | 2 (5.55%) |
| ಪ್ರೌಢಶಾಲೆ | 3 (17.64%) | 1 (11.11%) | 2 (18.18%) | 8 (22.22%) |
| ಒಟ್ಟು | 17 (100%) | 9 (100%) | 11 (100%) | 36 (100%) |

**ಮೂಲ: ಕ್ಷೇತ್ರಕಾರ್ಯ**

**ಶಿಕ್ಷಕರ ಹಾಜರಾತಿ**

ಪ್ರತಿಯೊಬ್ಬ ಶಿಕ್ಷಕರು ತಮ್ಮ ವೃತ್ತಿಯ ವಿಷಯಕ್ಕಾನುಗುಣವಾಗಿ ತಮಗೆ ಸರ್ಕಾರ ವಹಿಸಿರುವ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಅದರಂತೆ ಬುಡಕಟ್ಟು ಆಶ್ರಮ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶಾಲಾಶಿಕ್ಷಕರು ತರಗತಿಗಳಿ ಹೇಗೆ ಹಾಜರಾಗುತ್ತಿದ್ದಾರೆ ಎಂಬುದನ್ನು ತಿಳಿಯುವುದಾಗಿದೆ.

**ಕೊಷ್ಟಕ 3: ಶಿಕ್ಷಕರ ಹಾಜರಾತಿ ವಿವರ**

| ಶಿಕ್ಷಕರ ಹಾಜರಾತಿ | ಬುಡಕಟ್ಟಿನ ಹೆಸರು | | | ಒಟ್ಟು |
|---|---|---|---|---|
| | ಜೇನುಕುರುಬ | ಕಾಡು ಕುರುಬ | ಯರವ | |
| ಹಾಜರಾಗುತ್ತಾರೆ | 14 (87.5%) | 6 (66.66%) | 7 (63.63%) | 27 (75%) |
| ಗೈರುಹಾಜರಿ | 2 (12.5%) | 3 (33.33%) | 4 (36.36%) | 9 (25%) |
| ಒಟ್ಟು | 16 (100%) | 9 (100%) | 11 (100%) | 36 (100%) |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 3ರಲ್ಲಿ ಬುಡಕಟ್ಟು ಆಶ್ರಮ ಶಾಲೆಯ ಶಿಕ್ಷಕರು ತರಗತಿಗಳಿಗೆ ಹೇಗೆ ಹಾಜರಾತ್ತಾರೆ ಎಂಬ ವಿಷಯವನ್ನು ಮಕ್ಕಳಲ್ಲಿ ಕೇಳಿದಾಗ, ಶೇ 75ರಷ್ಟು ಹಾಜರಾಗುತ್ತಾರೆ ಎಂದು ತಿಳಿಸಿದರೆ, ಶೇ 25ರಷ್ಟು ಮಕ್ಕಳು ಶಿಕ್ಷಕರು ಹಾಜರಾಗುವುದಿಲ್ಲ ತಿಳಿಸಿರುವುದು ಕಂಡುಬಂದಿದೆ. ಈ ಅಂಶವನ್ನು ಗಮನಿಸಿದಾಗ ಹೆಚ್ಚಿನ ಶಿಕ್ಷಕರು ತರಗತಿಗಳಿಗೆ ಹಾಜರಾಗಿ ಮಕ್ಕಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಪಡಿಸುತ್ತಿರುವುದು ಕಂಡುಬಂದಿದೆ.

ಜೇನುಕುರುಬ, ಕಾಡುಕುರುಬ ಮತ್ತು ಯರವ ಎಲ್ಲಾ ಬುಡಕಟ್ಟು ಸಮುದಾಯದ ಮಕ್ಕಳು ಶಿಕ್ಷಕರು ಹಾಜರಾಗಿ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ಅಂಶವನ್ನು ವ್ಯಕ್ತಪಡಿಸಿರುವುದು ಕಂಡುಬಂದಿದೆ.

**ಕೊಷ್ಟಕ 4: ಶಿಕ್ಷಕರು ಮಾಡುವ ಬೋಧನೆ**

| ಬೋಧನೆ | ಬುಡಕಟ್ಟಿನ ಹೆಸರು | | | ಒಟ್ಟು |
|---|---|---|---|---|
| | ಜೇನುಕುರುಬ | ಕಾಡುಕುರುಬ | ಯರವ | |
| ಅರ್ಥವಾಗುತ್ತದೆ | 13 (81.25%) | 7 (77.77%) | 7 (63.63%) | 27 (75%) |
| ಅರ್ಥವಾಗುವುದಿಲ್ಲ | 3 18.75%) | 2 (22.22%) | 4 (36.36%) | 9 (25%) |
| ಒಟ್ಟು | 16 (100%) | 9 (100%) | 11 (100%) | 36 (100%) |

**ಮೂಲ: ಕ್ಷೇತ್ರಕಾರ್ಯ**

ಕೋಷ್ಟಕ 4ರಲ್ಲಿ ಬುಡಕಟ್ಟು ಆಶ್ರಮ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಯಾವ ರೀತಿ ಬೋಧನೆಯನ್ನು ಹೇಳಿಕೊಡುತ್ತಾರೆ ಎಂಬುದನ್ನು ಕೇಳಿದಾಗ, ಶೇ. 75ರಷ್ಟು ಮಕ್ಕಳು ಅರ್ಥವಾಗುತ್ತದೆ ಎಂದು ತಿಳಿಸಿದರೆ, ಶೇ 25ರಷ್ಟು ಮಕ್ಕಳು ಅರ್ಥವಾಗುವುದಿಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ.

**ಮೂಲಭೂತ ಸೌಲಭ್ಯಗಳು**

ಪ್ರತಿಯೊಬ್ಬರಿಗೂ ಜೀವಿಸಲು ತಮಗೆ ಅವಶ್ಯಕವಾಗಿ ಬಟ್ಟೆ, ಆಹಾರ ಕುಡಿಯುವ ನೀರು ಇವೇ ಅಲ್ಲದೆ ಇನ್ನೂ ಅನೇಕ ಮೂಲಭೂತ ಅವಶ್ಯಕ ಸೌಲಭ್ಯಗಳು ಬೇಕು. ಹಾಗೇ ಒಂದು ಶಾಲೆಯಲ್ಲಿಯೂ ಆ ಶಾಲೆಗೆ ಬೇಕಾಗಿರುವ ಮೂಲಭೂತ ಅವಶ್ಯಕ ಸೌಲಭ್ಯಗಳು ಇರಬೇಕು. ಇದರಂತೆ ಬುಡಕಟ್ಟು ಆಶ್ರಮಶಾಲೆಯಲ್ಲಿ ಯಾವ ಯಾವ ಸೌಲಭ್ಯಗಳಿವೆ ಎಂಬುದನ್ನು ತಿಳಿಯುವುದಾಗಿದೆ.

ಕೋಷ್ಟಕ 5ರಲ್ಲಿ ಬುಡಕಟ್ಟು ಗಿರಿಜನ ಆಶ್ರಮ ಶಾಲೆಯಲ್ಲಿ ಯಾವ ಯಾವ ಮೂಲಭೂತ ಸೌಲಭ್ಯಗಳಿವೆ ಎಂದು ಅಲ್ಲಿನ ಮಕ್ಕಳನ್ನು ಕೇಳಿದಾಗ, ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಶೇ 83.33ರಷ್ಟು ಮಕ್ಕಳು ಇದೆ ಎಂದು ತಿಳಿಸಿದರೆ, ಇಲ್ಲ ಎಂದು ಶೇ 16.66ರಷ್ಟು ಮಕ್ಕಳು ತಿಳಿಸಿರುವುದು ಕಂಡುಬಂದಿದೆ. ಹಾಗೇ ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆ ಬಗ್ಗೆ ಶೇ 72.22ರಷ್ಟು ಮಕ್ಕಳು ಇದೆ ಎಂದು ತಿಳಿಸಿದರೆ, ಶೇ 27.77ರಷ್ಟು ಮಕ್ಕಳು ಇಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ. ಶಾಲೆಯಲ್ಲಿ ಗ್ರಂಥಾಲಯ ವ್ಯವಸ್ಥೆ ಬಗ್ಗೆ ಶೇ 36.12ರಷ್ಟು ಮಕ್ಕಳು ಇದೆ ಎಂದು ತಿಳಿಸಿದರೆ, ಶೇ 63.64ರಷ್ಟು ಮಕ್ಕಳು ಇಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ. ಆಟದ ಮೈದಾನ ವ್ಯವಸ್ಥೆ ಬಗ್ಗೆ ಶೇ 55.55ರಷ್ಟು ಮಕ್ಕಳು ಇದೆ ಎಂದು ತಿಳಿಸಿದರೆ, ಶೇ 44.44ರಷ್ಟು ಮಕ್ಕಳು ಇಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ. ಶಾಲೆಯಲ್ಲಿ ಪ್ರಯೋಗಾಲಯ ವ್ಯವಸ್ಥೆ ಬಗ್ಗೆ ಕೇಳಿದಾಗ ಇದೆ ಎಂದು ಶೇ 33.33ರಷ್ಟು ವಿದ್ಯಾರ್ಥಿಗಳು ತಿಳಿಸಿದರೆ ,ಶೇ 66.66ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿದ್ದಾರೆ. ಒಟ್ಟಾರೆಯಾಗಿ ಎಲ್ಲಾ ಶಾಲೆಯ ಮಕ್ಕಳನ್ನು ಕೇಳಿದಾಗ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಹಾಗೂ ಆಟದ ಮೈದಾನದ ವ್ಯವಸ್ಥೆ ಇದೆ ಎಂದು ಹೆಚ್ಚಿನ ಮಕ್ಕಳು ತಿಳಿಸಿದರೆ, ಗ್ರಂಥಾಲಯ ಮತ್ತು ಪ್ರಯೋಗಾಲಯ ವ್ಯವಸ್ಥೆ ಬಗ್ಗೆ ಹೆಚ್ಚಿನ ಮಕ್ಕಳು ಇಲ್ಲವೆಂದು ತಿಳಿಸಿರುವುದು ಕಂಡುಬಂದಿದೆ.

**ಕೊಷ್ಟಕ 5: ಆಶ್ರಮ ಶಾಲೆಯಲ್ಲಿರುವ ಮೂಲಭೂತ ಸೌಲಭ್ಯಗಳ ವಿವರ**

| ಶಾಲೆಯಲ್ಲಿರುವ ಮೂಲಭೂತ ಸೌಲಭ್ಯಗಳು | | ಬುಡಕಟ್ಟಿನ ಹೆಸರು | | | ಒಟ್ಟು |
|---|---|---|---|---|---|
| | | ಜೇನುಕುರುಬ | ಕಾಡು ಕುರುಬ | ಯರವ | |
| ಕುಡಿಯುವ ನೀರು | ಹೌದು | 13 (81.25%) | 7 (77.77%) | 10 (90.90%) | 30 (83.33%) |
| | ಇಲ್ಲ | 3 (18.75%) | 2 (22.22%) | 1 (9.09%) | 6 (16.66%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಶೌಚಾಲಯ | ಹೌದು | 12 (75%) | 6 (66.66%) | 8 (72.72%) | 26 (72.22%) |
| | ಇಲ್ಲ | 4 (25%) | 3 (33.33%) | 3 (27.27%) | 10 (27.77%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಗ್ರಂಥಾಲಯ | ಹೌದು | 10 (62.2%) | 3 (33.33%) | 4 (36.36%) | 13 (36.12%) |
| | ಇಲ್ಲ | 6 (37.5%) | 6 (66.66%) | 7 (63.64%) | 23 (63.88%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಆಟದ ಮೈದಾನ | ಹೌದು | 9 (56.25%) | 5 (55.55%) | 6 (54.54%) | 20 (55.55%) |
| | ಇಲ್ಲ | 7 (43.75%) | 4 (44.44%) | 5 (45.45%) | 16 (44.44%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಪ್ರಯೋಗಾಲಯ | ಹೌದು | 3 (18.75%) | 4 (44.44%) | 5 (45.45%) | 12 (33.33%) |
| | ಇಲ್ಲ | 13 (81.25%) | 5 (55.55%) | 6 (54.55%) | 24 (66.66%) |
| | ಒಟ್ಟು | 16 (100%) | 9 (100%) | 11 (100%) | 36 (100%) |

**ಮೂಲ: ಕ್ಷೇತ್ರಕಾರ್ಯ**

ಒಟ್ಟಾರೆಯಾಗಿ ಎಲ್ಲಾ ಬುಡಕಟ್ಟು ಮಕ್ಕಳನ್ನು ಶಾಲೆಯಲ್ಲಿ ಸೌಲಭ್ಯಗಳ ಬಗ್ಗೆ ಕೇಳಿದಾಗ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಹಾಗೂ ಆಟದ ಮೈದಾನದ ವ್ಯವಸ್ಥೆ ಇದೆ ಎಂದು ಹೆಚ್ಚಿನ ಮಕ್ಕಳು ತಿಳಿಸಿದರೆ, ಗ್ರಂಥಾಲಯ ಮತ್ತು ಪ್ರಯೋಗಾಲಯ ವ್ಯವಸ್ಥೆ ಬಗ್ಗೆ ಹೆಚ್ಚಿನ ಮಕ್ಕಳು ಇಲ್ಲವೆಂದು ತಿಳಿಸಿರುವುದು ಕಂಡುಬಂದಿದೆ.

### ಮಕ್ಕಳಿಗಿರುವ ಭೋಧನಾ ಸಮಸ್ಯೆಗಳು

ಶಿಕ್ಷಕರು ಶಾಲೆಯಲ್ಲಿ ಮಕ್ಕಳಿಗೆ ಪಾಠ ಮಾಡುವ ಮೊದಲು ಮಕ್ಕಳ ಮನಃಸ್ಥಿತಿಯನ್ನು ಅರ್ಥಮಾಡಿಕೊಂಡು ಪಾಠ ಪ್ರವಚನ ಮಾಡಬೇಕು. ಹಾಗಾದರೆ ಬುಡಕಟ್ಟು ಆಶ್ರಮ ಶಾಲೆಯಲ್ಲಿ ಕೆಲಸ

ನಿರ್ವಹಿಸುತ್ತಿರುವ ಶಿಕ್ಷಕರು ಯಾವ ರೀತಿ ಬೋಧನಾ ವಿಧಾನ ಆಳವಡಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯುವುದಾಗಿದೆ.

**ಕೋಷ್ಟಕ 6: ಮಕ್ಕಳಿಗಿರುವ ಬೋಧನಾ ಸಮಸ್ಯೆಗಳ ವಿವರ:**

| ಬೋಧನಾ ಸಮಸ್ಯೆಗಳು | ಬುಡಕಟ್ಟಿನ ಹೆಸರು | | | ಒಟ್ಟು |
|---|---|---|---|---|
| | ಜೇನುಕುರುಬ | ಕಾಡು ಕುರುಬ | ಯರವ | |
| ಭಾಷೆ ಶೈಲಿ | 4 (25%) | 3 (33.33%) | 3 (27.27%) | 10 (27.79%) |
| ಶಿಕ್ಷಕರ ವರ್ತನೆ | 2 (12.5%) | 1 (11.11%) | 2 (18.18%) | 5 (13.88%) |
| ಬೋಧನಾ ವಿಧಾನ | 3 (18.75%) | 1 (11.11%) | 1 (9.09%) | 5 (13.88%) |
| ಸಮಸ್ಯೆ ಇಲ್ಲ | 7 (43.75%) | 4 (44.44%) | 5 (45.45%) | 16 (44.44%) |
| ಒಟ್ಟು | 16 (100%) | 9 (100%) | 11 (100%) | 36 (100%) |

**ಮೂಲ: ಕ್ಷೇತ್ರಕಾರ್ಯ**

ಈ ಮೇಲಿನ ಕೋಷ್ಟಕ 6ರಲ್ಲಿ ಆಶ್ರಮ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಶಿಕ್ಷಕರು ಮಾಡುವ ಭೋಧನೆಗಳಲ್ಲಿ ಯಾವುದಾರೂ ಸಮಸ್ಯೆಗಳಿವೆ ಎಂದು ಮಕ್ಕಳನ್ನು ಕೇಳಿದಾಗ ಶೇ. 77.79 ರಷ್ಟು ಮಕ್ಕಳು ಭಾಷೆಯ ಶೈಲಿ ಸಮಸ್ಯೆ ಬಗ್ಗೆ ತಿಳಿಸಿದ್ದು, ಶೇ. 13.88ರಷ್ಟು ಶಿಕ್ಷಕರ ವರ್ತನೆ ಬಗ್ಗೆ, ಶೇ. 13.88ರಷ್ಟು ಬೋಧನಾ ವಿಧಾನದಲ್ಲಿ, ಹಾಗೂ ಶೇ. 44.44ರಷ್ಟು ಮಕ್ಕಳು ಯಾವುದೇ ಸಮಸ್ಯೆಗಳಿಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ. ಆದರೆ ಹೆಚ್ಚು ಮಕ್ಕಳು ಯಾವುದೇ ಸಮಸ್ಯೆಯಿಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ.

ಕೋಷ್ಟಕ 7 ರಲ್ಲಿ ಎಲ್ಲಾ ಬುಡಕಟ್ಟು ಮಕ್ಕಳಿಂದ ಆಶ್ರಮ ಶಾಲೆಯ ವಿದ್ಯಾರ್ಥಿನಿಲಯದಲ್ಲಿರುವ ಮೂಲಭೂತ ಸೌಕರ್ಯಗಳ ಕುರಿತು ವಿವರಿಸಿದಾಗ, ಶೇ 80.55ರಷ್ಟು ಮಕ್ಕಳು ಮಲಗುವ ಮಂಚದ ವ್ಯವಸ್ಥೆಯು ಇದೆ ಎಂದರೆ, ಶೇ 19.44ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿರುವುದಾಗಿ ಕಂಡುಬಂದಿದೆ. ಹಾಗೆ ಶೇ 66.66ರಷ್ಟು ಮಕ್ಕಳು ಹಾಸಿಗೆ ಮತ್ತು ಹೊದಿಕೆ ವ್ಯವಸ್ಥೆಯು ಇದೆ ಎಂದರೆ, ಶೇ 33.33ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿರುವುದು ಕಂಡುಬಂದಿದೆ. ಅಲ್ಲದೆ ಶೇ 61.11ರಷ್ಟು ಮೇಜು ಮತ್ತು ಕುರ್ಚಿ ವ್ಯವಸ್ಥೆಯು ಇದೆ ಎಂದರೆ, ಶೇ 38.81ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿರುವುದಾಗಿ ಕಂಡುಬಂದಿದ್ದು, ಹಾಗೆ ಶೇ72.22ರಷ್ಟು ವಿದ್ಯುತ್ ವ್ಯವಸ್ಥೆಯು ಇದೆ ಎಂದರೆ, ಶೇ 27.27ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿರುವುದಾಗಿ ಕಂಡುಬಂದಿದೆ. ಹಾಗೆ ಶೇ 61.11ರಷ್ಟು ಊಟದ ಗುಣಮಟ್ಟ ತೃಪ್ತಿ ಇದೆ ಎಂದರೆ, ಶೇ 38.88ರಷ್ಟು ವಿದ್ಯಾರ್ಥಿಗಳು ತೃಪ್ತಿ ಇಲ್ಲ ಎಂದು ತಿಳಿಸಿರುವುದಾಗಿ ಕಂಡುಬಂದಿದೆ. ಹಾಗೆ ಶೇ 61.11ರಷ್ಟು ನೀರಿನ ವ್ಯವಸ್ಥೆ ಇದೆ ಎಂದರೆ, ಶೇ 38.88ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿದ್ದಾರೆ. ಹಾಗೆ ಶೇ 75ರಷ್ಟು ಮಕ್ಕಳು ಶೌಚಾಲಯ ವ್ಯವಸ್ಥೆ ಇದೆ ಎಂದರೆ, ಶೇ 25ರಷ್ಟು ವಿದ್ಯಾರ್ಥಿಗಳು ಇಲ್ಲ ಎಂದು ತಿಳಿಸಿರುವುದಾಗಿ ಕಂಡುಬಂದಿದೆ.

**ಕೋಷ್ಟಕ 7: ಆಶ್ರಮ ಶಾಲೆಯ ವಿದ್ಯಾರ್ಥಿನಿಲಯದ ಮೂಲಭೂತ ಸೌಕರ್ಯಗಳು**

| ಮೂಲಭೂತ ಸೌಲಭ್ಯಗಳು | | ಬುಡಕಟ್ಟಿನ ಹೆಸರು | | | ಒಟ್ಟು |
|---|---|---|---|---|---|
| | | ಜೇನುಕುರುಬ | ಕಾಡುಕುರುಬ | ಯರವ | |
| ಮಂಚ | ಹೌದು | 13 (81.25%) | 6 (66.6%) | 10 (90.90%) | 29 (80.55%) |
| | ಇಲ್ಲ | 3 (18.75%) | 3 (33.33%) | 1 (9.9%) | 7 (19.44%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಹಾಸಿಗೆ&ಹೊದಿಕೆ | ಹೌದು | 12 (75%) | 3 (33.33%) | 9 (81.81%) | 24 (66.66%) |
| | ಇಲ್ಲ | 4 (25%) | 6 (66.66%) | 2 (18.18%) | 12 (33.33%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಮೇಜು&ಕುರ್ಚಿ | ಹೌದು | 10 (62.2%) | 5 (55.5%) | 7 (63.64%) | 22 (61.11%) |
| | ಇಲ್ಲ | 6 (37.5%) | 4 (44.4%) | 4 (36.36%) | 14 (38.81%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ವಿದ್ಯುತ್ ವ್ಯವಸ್ಥೆ | ಹೌದು | 12 (75%) | 6 (66.6%) | 8 (72.72%) | 26 (72.22%) |
| | ಇಲ್ಲ | 4 (25%) | 3 (33.33%) | 3 (27.28%) | 10 (27.77%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಊಟದ ಗುಣಮಟ್ಟ | ತೃಪ್ತಿಇದೆ | 9 (56.25%) | 7 (77.7%) | 6 (54.54%) | 22 (61.11%) |
| | ತೃಪ್ತಿಇಲ್ಲ | 7 (43.75%) | 3 (33.33%) | 5 (45.45%) | 14 (38.88%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ನೀರಿನ ವ್ಯವಸ್ಥೆ | ಇದೆ | 12 (75%) | 5 (55.55%) | 5 (45.45%) | 22 (61.11%) |
| | ಇಲ್ಲ | 4 (25%) | 4 (44.44%) | 6 (54.54%) | 14 (38.88%) |
| | ಒಟ್ಟು | 16 (100%) | 9 (100%) | 11 (100%) | 36 (100%) |
| ಶೌಚಾಲಯ ವ್ಯವಸ್ಥೆ | ತೃಪ್ತಿಇದೆ | 13 (81.75%) | 6 (66.66%) | 8 (72.72%) | 27 (75%) |
| | ತೃಪ್ತಿಇಲ್ಲ | 3 (18.25%) | 3 (33.33%) | 3 (27.27%) | 9 (25%) |
| | ಒಟ್ಟು | 16 (100%) | 9 (100%) | 11 (100%) | 36 (100%) |

**ಮೂಲ: ಕ್ಷೇತ್ರಕಾರ್ಯ**

ಈ ಮೇಲಿನ ಕೋಷ್ಟಕ ವನ್ನು ಗಮನಿಸಿದಾಗ ಹೆಚ್ಚಿನ ಮಕ್ಕಳು ಮಲಗುವ ಮಂಚ, ಹಾಸಿಗೆ ಮತ್ತು ಹೊದಿಕೆ, ಮೇಜು ಮತ್ತು ಕುರ್ಚಿ, ವಿದ್ಯುತ್ ವ್ಯವಸ್ಥೆ, ಊಟದ ಗುಣಮಟ್ಟ ಹಾಗೂ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ವ್ಯವಸ್ಥೆ ಇದ್ದರು ಅವುಗಳ ಗುಣಮಟ್ಟದಲ್ಲಿ ತೃಪ್ತಿದಾಯಕವಾಗಿಲ್ಲ ಎಂಬ ಅಂಶವನ್ನು ಈ ಮಕ್ಕಳು ತಿಳಿಸಿರುವುದು ಅಧ್ಯಯನದಿಂದ ಕಂಡುಬಂದಿದೆ.

ಜೇನುಕುರುಬ, ಕಾಡುಕುರುಬ ಮತ್ತು ಯರವ ಬುಡಕಟ್ಟು ಸಮುದಾಯದ ಮಕ್ಕಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಮಲಗುವ ಮಂಚ, ಹಾಸಿಗೆ ಮತ್ತು ಹೊದಿಕೆ, ಮೇಜು ಮತ್ತು ಕುರ್ಚಿ, ವಿದ್ಯುತ್ ವ್ಯವಸ್ಥೆ, ಊಟದ ಗುಣಮಟ್ಟ ಹಾಗೂ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ವ್ಯವಸ್ಥೆ ಇದ್ದರು ಅವುಗಳು ಸರಿಯಾಗಿ ಬಳಕೆಯಾಗುತ್ತಿಲ್ಲ. ಎಂಬ ಅಂಶವನ್ನು ಈ ಮಕ್ಕಳು ತಿಳಿಸಿರುವುದು ಅಧ್ಯಯನದಿಂದ ಕಂಡುಬಂದಿದೆ.

**ಬುಡಕಟ್ಟು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಲಹೆಗಳು**

- ಬುಡಕಟ್ಟು ಆಶ್ರಮ ಶಾಲೆಗಳಿಗೆ ಬುಡಕಟ್ಟು ಸಮುದಾಯದ ಅರ್ಹ ತರಬೇತಿ ಪಡೆದ ಶಿಕ್ಷಕರನ್ನು ಸರ್ಕಾರ ನೇಮಿಸಬೇಕು.
- ಬುಡಕಟ್ಟು ಮಕ್ಕಳಿಗೆ ಅವರದ್ದೇ ಆದ ಭಾಷೆಯಲ್ಲಿ ಪಠ್ಯವನ್ನು ಸಿದ್ದಪಡಿ ಭೋಧಿಸಬೇಕು.
- ಬುಡಕಟ್ಟು ಆಶ್ರಮ ಶಾಲೆಗಳನ್ನು 1ರಿಂದ 10ನೇ ತರಗತಿಯ ವಿಸ್ತರಿಸಿ, ತಾಲೂಕಿಗೊಂದು ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳನ್ನು ಇದರ ಅಡಿಯಲ್ಲಿಯೇ ತೆರೆಯಬೇಕು.
- ಬುಡಕಟ್ಟು ಆಶ್ರಮ ಶಾಲೆಗಳಿಗೆ ಉತ್ತಮ ರಸ್ತೆ, ಕೊಠಡಿಗಳು, ಬಟ್ಟೆ, ಪುಸ್ತಕ, ಕುಡಿಯುವ ನೀರು, ಆಟದ ಮೈದಾನ, ಗ್ರಂಥಾಲಯ ಮತ್ತು ಶೌಚಾಲಯ ಈ ಮೂಲಭೂತ ಅವಶ್ಯಕ ಸೌಕರ್ಯಗಳನ್ನು ಒದಗಿಸಿಕೊಡಬೇಕು.
- ಆಶ್ರಮ ಶಾಲೆಯ ವಿದ್ಯಾರ್ಥಿ ನಿಲಯದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಮಲಗಲು ಪ್ರತ್ಯೇಕವಾದ ಕೊಠಡಿ ವ್ಯವಸ್ಥೆ ಹಾಗೂ ಮಂಚ, ಹಾಸಿಗೆ–ಹೊದಿಕೆ, ವಿದ್ಯುತ್, ಬಿಸಿನೀರು, ಉತ್ತಮ ಗುಣಮಟ್ಟದ ಊಟ, ಶೌಚಾಲಯ ಅಲ್ಲದೆ ಇನ್ನೂ ಅನೇಕ ಮೂಲಭೂತ ಸೌಲಭ್ಯಗಳನ್ನು ವಿದ್ಯಾರ್ಥಿ ನಿಲಯಗಳಿಗೆ ಒದಗಿಸಬೇಕು.

**ಉಪಸಂಹಾರ**

ಒಟ್ಟಾರೆ ಒಂದು ರಾಷ್ಟ್ರದ ಅಭಿವೃದ್ಧಿಯಾಗಬೇಕಾದರೆ ಸಾಂಸ್ಕೃತಿಕ ಮೌಲ್ಯಗಳು ಆರ್ಥಿಕ ಹಾಗೂ ಸಾಮಾಜಿಕ ಒಲವು ಶಿಕ್ಷಣದ ಮೇಲೆ ಅವಲಂಬಿಸಿರುತ್ತದೆ. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣವು ಪ್ರಜಾಪ್ರಭುತ್ವದ ಸಹಾಯಕನಂತೆ ಕೆಲಸ ಮಾಡುತ್ತದೆ. ಒಬ್ಬ ವ್ಯಕ್ತಿಯ ಸಂಸ್ಕೃತಿ, ಆಚಾರ–ವಿಚಾರ, ಸಾಮಾಜಿಕ, ಆರ್ಥಿಕ ವ್ಯವಸ್ಥೆಗೆ ಶಿಕ್ಷಣವು ಪ್ರಭಾವ ಬೀರುತ್ತದೆ. ಶಿಕ್ಷಣವು ಸಾಮಾಜಿಕ ಸಂಸ್ಥೆಯಾಗಿದ್ದು, ವ್ಯಕ್ತಿಯ ವೈಜ್ಞಾನಿಕ ಚಿಂತನೆಗೆ ಹಾಗೂ ಅವನ ಸರ್ವತೋಮುಖ ಬೆಳವಣಿಗೆಗೆ ಭಾಷೆ, ಅವರ ಸಂಸ್ಕೃತಿಯ ಉಳಿಗಾಗಿ ಕೆಲಸ ಮಾಡುತ್ತದೆ.

ಬುಡಕಟ್ಟು ಮಕ್ಕಳಿಗೆ ಈ ರೀತಿಯ ವ್ಯವಸ್ಥೆಯುಳ್ಳ ಶಾಲೆಗಳನ್ನು ತೆರೆದರೂ ಮಕ್ಕಳ ಗೈರು ಹಾಜರಿ, ಮಧ್ಯಂತರದಲ್ಲಿ ಶಾಲೆ ಬಿಡುವಿಕೆ ಪ್ರಮಾಣ ಎದ್ದು ಕಾಣುತ್ತಿದೆ. ಇದಕ್ಕೆ ಕಾರಣ ಬುಡಕಟ್ಟು ಸಮುದಾಯಗಳಲ್ಲಿರುವ ಬಡತನ, ಆರ್ಥಿಕ ಹಿಂದುಳಿದಿರುವುದು, ಅರಣ್ಯ ಉತ್ಪನ್ನಗಳ ಮೇಲಿನ

ಅವಲಂಬನೆ ಹಾಗೂ ಋತುಮಾನದ ವಲಸೆ ಇವೇ ಅಲ್ಲದೆ ಇನ್ನೂ ಹಲವು ಕಾರಣಗಳಿಂದಾಗಿ ಶೈಕ್ಷಣಿಕ ಹಿಂದುಳಿಯಲು ಕಾರಣವಾಗಿದೆ. ಇವತ್ತಿಗೂ ಎಲ್ಲಾ ಬುಡಕಟ್ಟು ಸಮುದಾಯದ ಮಕ್ಕಳಿಗೂ ಶಿಕ್ಷಣ ನೀಡಲು ಸಾಧ್ಯವಾಗಿಲ್ಲ. ಇವರನ್ನು ಶೈಕ್ಷಣಿವಾಗಿ ಅಭಿವೃದ್ಧಿ ಪಡಿಸಲೇಂದೇ ದೇಶದ್ಯಾಂತ ಹಲವಾರು ಶೈಕ್ಷಣಿಕ ಕಾರ್ಯಕ್ರಮಗನ್ನು ರೂಪಿಸಿ ಅನುಷ್ಠಾನ ಮಾಡಿದರೂ ಇವರ ಶೈಕ್ಷಣಿಕ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಬುಡಕಟ್ಟು ಸಮುದಾಯಗಳಲ್ಲಿ ಬಹುಪಾಲು ಪೋಷಕರಿಗೆ ವೈಯಕ್ತಿಕವಾದ ಕಷ್ಟಗಳಲ್ಲಿ ಶಿಕ್ಷಣ ಅಸಹನೀಯವಾದ ಹೊರೆ ಎನಿಸಿದೆ. ಈಗಾಗಲೇ ಓದಿರುವವರಿಗೆ ಕೆಲಸವಿಲ್ಲದೆ ಕೂಲಿ ಮಾಡುತ್ತಿದ್ದಾರೆ, ಇನ್ನೂ ಇವರು ಓದಿ ಉದ್ದಾರವಾಗಬೇಕಾದದ್ದು ಏನು ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಗಮನಿಸಿದರೆ ಮೊದಲು ಪೋಷಕರಿಗೆ ಶೈಕ್ಷಣಿಕ ಅರಿವು ಮೂಡಿಸಬೇಕು. ನಂತರ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುವ ಹೊಣೆ ಪೋಷಕರೇ ಹೊರೆತು ಬೇರ‍್ಯಾರು ಜವಾಬ್ದಾರರಲ್ಲ ಎಂದಾಗ ಮಾತ್ರ ಬುಡಕಟ್ಟು ಮಕ್ಕಳನ್ನು ಶೈಕ್ಷಣಿಕ ಪ್ರಗತಿಯತ್ತ ಕೊಂಡ್ಯೊಯಲು ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಗಿರೀಗೌಡ ಎಲ್. (2011). *ಹೆಗ್ಗಡದೇವನ ಕೋಟೆ ಗೆಜೆಟಿಯರ್.* ಕರ್ನಾಟಕ ಗೆಜೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ.
- ಮಂಜುನಾಥ್ ಬಿ.ಆರ್. (2014) *ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳು ಒಂದು ಮಾನವಶಾಸ್ತ್ರೀಯ ಅಧ್ಯಯನ.* ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ.
- ನಂಜಮ್ಮಣ್ಣಿ ಎಂ. (1982). *ಭಾರತೀಯ ಸಾಮಾಜಿಕ ಸಂಸ್ಥೆಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಶಂಕರ್‌ರಾವ್ ಚ. ನ. (2014). *ಸಾಮಾಜಿಕ ಸಂಶೋಧನಾ ಕೈಪಿಡಿ.* ಜೈ ಭಾರತ್ ಪ್ರಕಾಶನ.
- ತಾರಿಹಳ್ಳಿ ಹನುಮಂತಪ್ಪ (ಸಂ). (2010). *ಕರ್ನಾಟಕ ಬುಡಕಟ್ಟು ಸಮುದಾಯಗಳು.* ಪ್ರಾಸರಾಂಗ, ಕನ್ನಡ ವಿಶ್ವವಿದ್ಯಾನಿಲಯ.
- ವೀರಭದ್ರ ನಾಯಕ ಪಿ. (2010). *ಶಿಕ್ಷಣ ವಂಚಿತ ಬುಡಕಟ್ಟು* ಮಕ್ಕಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ.
- ವೀರಭದ್ರನಾಯಕ ಪಿ. (2010). *ಶಿಕ್ಷಣ ಮತ್ತು ಬುಡಕಟ್ಟು ಅಭಿವೃದ್ಧಿ ಚಾಮರಾಜನಗರ ಜಿಲ್ಲೆಯ ಆಶ್ರಮ ಶಾಲೆಗಳ ಒಂದು ವಿಮರ್ಶಾತ್ಮಕ ಅಧ್ಯಯನ.* ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ.
- Ghurya G.S. (1990). Caste and Race in India. Popular Publication, Bambay.
- Sujatha. K. (2009). Education of Indian Scheduled Tribes: A study of community schools in the district of Vishakhapatnam, Andhra Pradesh.